ಫಾರೆಸ್ಟ್ ಇಲಾಖೆ.

ತಾರೀಖು 5ನೇ ಮಾರ್ಚಿ 1889.

ಹಾಸನ ಡಿಸ್ಟ್ರಿಕ್ಟ್ ಮಂಜಿರಾಬಾದ್ ತಾಲ್ಲೂಕಿನಲ್ಲಿರತಕ್ಕ ಇದರಡಿ ಕಂಡ ಫಾಟ್ ಫಾರೆಸ್ಟುಗಳಲ್ಲಿ ವೃತ್ಪತ್ತಿ ಆಗುವ ಇಲಾಚಿ ಮತ್ತು ಮೆಣಸನ್ನು ಗೇಣೀ ಮೂಲಕ ಹತ್ತು ವರುಷಗಳ ಕಾಲಕ್ಕೆ 1889—90ನೇ ಸರ್ಕಾರ್ ಸಾಲ್ ಲಾಗಾಯತು 1898—99ನೇ ಸರ್ಕಾರ್ ಸಾಲಿನ ವರಿಗೆ ಜಮಾಯಿಸುವ ಹಕ್ಕುದಾರೀ ಬಗ್ಯೆ ದರಖಾಸ್ತುಗಳು ಇದರ ದೆಸೆಯಿಂದ ಅಪೇಕ್ಷಿಸಲ್ಪಡುತವೆ.

1 ಬಿಸಲೆ ಫಾಟ್ ಫಾರೆಸ್ಟು.

2 ಕೆಂಪು ಹೊಳೆ ಮತ್ತು ಕೆಂಚನ ಕುಮರೀ ಫಾರೆಸ್ಟು.

2. ದರಖಾಸ್ತುಗಳು, "ಫಾಟ್‌ಫಾರೆಸ್ಟುಗಳ ಯಿಲಾಚಿ ಮತ್ತು ಮೆಣಸಿನ ಗೇಣೀಗೋಸ್ಕರ ದರಖಾಸ್ತುಗಳು" ಯಂಬದಾಗಿ ಮೇಲ್ವಿಳಾಸ ಬರಿಯಲ್ಪಟ್ಟು ಹಾಸನದ ಮೊಕ್ಕಾಂ ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ 1889ನೇ ಜೂನ್ 24ನೇ ಮಠ್ಠಂ ಯಾ ಆದಕ್ಕೆ ಮುಂಚಿತವಾಗಿ ತಲಪುವಂತೆ ಕಳುಹಿಸಲ್ಪಡತಕ್ಕದ್ದು. ದರಖಾಸ್ತುಗಳು, 1889ನೇ ಇಸವಿ ಜೂನ್ 24ನೇ ಮಠ್ಠಮಿನ ಲ್ಲಿ ಹಾಜರಾಬಹುದಾದ ದರಖಾಸ್ತುದಾರರ ರೂಬರೂ ಡೆಪ್ಯೂಟಿ ಕಮ್ಮಿಷನರವರ ಆಫಿಸಿನಲ್ಲಿ ಸದರೀಯವರಿಂದಲಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಂದಲಾಗಲಿ ಆಫಿಸ್ ಹೊತ್ತಿನಲ್ಲಿ ಖುಲ್ಲಾ ಮಾಡಲ್ಪಡುವವು. ಸದರೀ ದರಖಾಸ್ತುಗಳ ಅಬ್ಜೆರು ವಿಲೇವಾರಿಯು ಮೈಸೂರು ದೇಶದ ಫಾರೆಸ್ಟ್ ವ ಪ್ಯಾಟೇರ್ಪಗಳ ಇನ್‌ಸ್ಪೆಕ್ಟರ್ ಜನರಲ್‌ಯವರಿಗೆ ಕೇರಾಫ್ತ್—ಸದರೀ ಯಾವ ದರಖಾಸ್ತನ್ನಾಗಲಿ ಯಾ ತದ್ಭಾಗ ದರಖಾಸ್ತುಗಳನ್ನಾಗಲಿ ಯಾವ ಸಬಬೂ ತಿಳಿಸದೇಯೇ ತಿರಸ್ಕರಿಸುವ ಪೂರಾ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಪುಳಸಿಕೊಂಡಿರುತ್ತಾರೆ.

3. ಪ್ರತಿ ದರಖಾಸ್ತಿನ ಸಂಗಡಲೂ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಒಂದು ನೂರು ರೂಪಾಯಿಗಳ ತೇವಣಿಯನ್ನು ಕಳುಹಿಸತಕ್ಕದ್ದು. ತಿರಸ್ಕರಿಸಲ್ಪಡುವ ದರಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ತೇವಣಿಗಳು ಆಯಾ ಜನಗಳಿಗೆ ಕ್ರಮವಾಗಿ ವಾಪಸು ಮಾಡಲ್ಪಡುವವು.

4. ಯಾವ ದರಖಾಸ್ತು ಫಾರೆಸ್ಟ್ ವ ಪ್ಯಾಟೇರ್ಪಗಳ ಇನ್‌ಸ್ಪೆಕ್ಟರ್ ಜನರಲ್‌ಯವರಿಂದ ಆಖೈರಾಗಿ ಮಂಜೂರ್ಮಾಡಲ್ಪಡುತ್ತದೆಯೋ ಆಂಥಾ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ 15 ದಿವಸಗಳವಳಗಾಗಿ ನಗದಾಗಿಯಾದರೂ ಆಥವಾ ಕರೆನ್ಸೀ ನೋಟುಗಳ ಮೂಲಕವಾಗಿಯಾದರೂ ತಾನು ಮೊದಲೇ ಹಾಜರ್ಮಾಡಿರುವ ಡಿಪಾಜಿಟ್ ಮೊಬಲಗು ದೇಮೀಲ್ ಗುತ್ತಿಗೇ ಮೊಬಲಗಿನ, ಹತ್ತರಲ್ಲಿ ಒಂದು ಭಾಗಕ್ಕೆ ಸಮಾನಾಗುವಂತೆ ತೇವಣೇ ಮೊಬಲಗನ್ನು ಡೆಪ್ಯೂಟಿ ಕಮ್ಮಿಷನರವರಲ್ಲಿ ಹಾಜರ್ಮಾಡಿ ತಕ್ಕ ಛಾಪಾಕಾಗದದಲ್ಲಿ ಮುಂದೆ ವ್ಯವಹರಿಸಲ್ಪಟ್ಟ ಷರತ್ತುಗಳಿಗೆ ವಳಪಟ್ಟು ಬದ್ಧನಾಗಿ ಕರಾರು ಬರದು ಕೊಡತಕ್ಕದ್ದು. ಮತ್ತು ಆತನು ಸದರೀ ಕರಾರಿಗೆ ರುಜೂ ಮಾಡುವದಕ್ಕೆ ತಪ್ಪಿದರೆ ಯಾ ತಿರಸ್ಕರಿಸಿದರೆ ಅಥವಾ ಅವಶ್ಯಕವಾದ ತೇವಣಿಯನ್ನು ಹಾಜರ್ ಮಾಡದಿದ್ದರೆ ಮೊದಲೇ ಯಿಹೋಣಾದ ಡಿಪಾಜಿಟ್ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದಲ್ಲದೆ ಗೇಣಿಯು ಅನ್ಯಥಾ ವಿಲಾಮಾಡಲ್ಪಡುವದು.

5. ಹೀಲೀ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುವ ಗೇಣಿಯು ಇದರಡಿ ಕಂಡ ಷರತ್ತುಗಳಿಗೆ ವಳಪಟ್ಟಿರತಕ್ಕದ್ದು.

I. ಗೇಣೀ ಮೊಬಲಗು ಹತ್ತು ಸಮಾನಾದ ಸಾಲಿಯಾನಾ ಖಿಸ್ತುಗಳಾಗಿ ಪ್ರತಿ ಆಗಸ್ಟು ತಿಂಗಳಲ್ಲಿ ಅಂದರೆ ಆಹಾ ಕಾಲದ ಫಸಲನ್ನು ಜಮಾಯಿಸುವದಕ್ಕೆ ಮುಂಚಿತವಾಗಿ ಸರ್ಕಾರಕ್ಕೆ ಪಾವತಿ ಮಾಡಲ್ಪಡತಕ್ಕದ್ದು. ಗೇಣೀದಾರನು ಇದಕ್ಕೆ ತಪ್ಪಿದರೆ ಗೇಣಿಯು ರದ್ದು ಮಾಡಲ್ಪಟ್ಟು ಗೇಣಿಗೆ ಕೊಡಲ್ಪಟ್ಟ ಫಾರೆಸ್ಟುಗಳು ಸರ್ಕಾರ್ ಸ್ವಾಧೀನತೆಗೆ ತೆಗದುಕೊಳ್ಳಲ್ಪಡುವದು ಗೇಣಿದಾರನಿಂದ ಯಿಡಲ್ಪಟ್ಟ ತೇವಣಿಯು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

II. ಗೇಣೀವಾಯಿದೆಯು ಮುಗಿದ ತರುವಾಯ ಗೇಣಿಯನ್ನು ರಿನ್ಯೂ ಯಾನೇ ಪುನಃ ಪಡೆಯುವ ಬಗ್ಯೆ ಸರ್ಕಾರವರಿಗೆ ಯುಕ್ತವಾಗಿ ತೋರಿಬರುವ ಷರತ್ತುಗಳ ಮೇಲೆ ಮತ್ತು ಹಾಂಗೆ ಗೊತ್ತುಮಾಡಲ್ಪಡಬಹುದಾದ ಕಾಲಕ್ಕೆ ಗೇಣೀದಾರನಿಗೆ ಅವಕಾಶ ಕೊಡಲ್ಪಡಬಹುದು.

III. ಗೇಣಿಯು, ಇಲಾಚಿ ಮತ್ತು ಮೆಣಸನ್ನು ಜಮಾಯಿಸುವದಕ್ಕೂ ಮತ್ತು ಅವುಗಳನ್ನು ಸಾಗುವಳಿ ಮಾಡುವದಕ್ಕೂ ಮಾತ್ರವೇ ಆಗಿರುವದರಿಂದ ಇವ್ಯಾವ ತರಹೆಯ ಇತರ ಫಸಲುಗಳಿಗೆ ಗೇಣಿಗೆ ಪಡದಿರುವ ಫಾರೆಸ್ಟುನಲ್ಲಿ ಸಾಗುವಳಿ ಮಾಡಲ್ಪಡಕೂಡದು, ಪರಂತು, ಇಲಾಚಿ ಗಿಡಗಳಿಗೂ ಮೆಣಸಿನ ಬಳ್ಳಿಗಳಿಗೂ ನೆರಳಿಗೋಸ್ಕರ ಅವಶ್ಯಕವಾದ ಬೂಳಿ, ಹರಳು ಯಾ ಇತರ ಮರಗಳು ಬೆಳಸಕೂಡದೆಂದು ಅರ್ಥವಾಗತಕ್ಕದ್ದಲ್ಲ.

V. ಫಾರೆಸ್ಟ್ ಆಫೀಸರರ ಬರಹಮೂಲಕವಾದ ಅಪ್ಪಣೆ ವಿನಹ ಯಾವ ವಿಧವಾದ ಮರವೇ ಆಗಲಿ ಕಡಿಯಲ್ಪಡಕೂಡದು ಮತ್ತು ಗೇಣೀಗೆ ಕೊಡಲ್ಪಟ್ಟ ಫಾರೆಸ್ಟುಗಳಿಂದ ಯಾವ ಇಲಾಚೀ ಗಿಡಗಳಾಗಲಿ ಮೆಣಸಿನ ಬಳ್ಳಿಯಾಗಲಿ ಯಾವ ಸಂದರ್ಭಗಳಲ್ಲೂ ಆಗೆದು ಆಚೆಗೆ ಸಾಗಿಸಲ್ಪಡಕೂಡದು, ಇಲಾಚೀ ಗಿಡಗಳ ಮತ್ತು ಮೆಣಸಿನ ಬಳ್ಳಿಗಳ ಬೆಳವಣಿಗೆ ಯಾ ಅಭಿವೃದ್ಧಿಗೋಸ್ಕರವೇ ಜಮೀನನ್ನು ಬೈಲ್ ಮಾಡುವದಕ್ಕಾಗಿ ಯಾವದಾದರೂ ಮರಗಳನ್ನು ಕತರಾಯಿಸುವದು ಅವಶ್ಯಕವಾದಾಗ ಗೇಣೀದಾರನು ಫಾರೆಸ್ಟು ಆಫಿಸರರಿಗೆ ಬರದುಕೊಳ್ಳತಕ್ಕದ್ದು ಅವರು ಕತರಾಯಿಸಲ್ಪಡಬೇಕಾದ ಮರಗಳನ್ನು ಗುರ್ತು ಮಾಡತಕ್ಕದ್ದು ಮತ್ತು ಹಾಂಗೆ ಕತರಾಯಿಸಲ್ಪಟ್ಟ ಮರಗಳು ಫಾರೆಸ್ಟು ಇಲಾಖೆಯವರಿಂದ ಸ್ವಾಧೀನಕ್ಕೆ ತೆಗದುಕೊಳ್ಳಲ್ಪಡತಕ್ಕದ್ದು ಗೇಣೀದಾರನು ಸದರೀ ಮರಗಳ ಸ್ಯಕಿ ಯಾವದನ್ನಾದರೂ ಆಪೇಕ್ಷಿಸಿದರೆ ಇದರಡಿಕಂಡ ಗೊತ್ತಾದ ಸೀನಿಯಾರೇಟ್ ಯಾನೇ ತೀರ್ವೇದರಗಳು ಯಾ ಡೆಪ್ಯೂಟಿ ಕಮ್ಮಿಷನರವರ ಯುಕ್ತಾನುಸಾರ ಯಿನ್ನೂ ಕಮ್ಮಿ ಆದ ದರಗಳನ್ನು ಪಾವತಿನಾಮಡಲ್ಪಟ್ಟ ತರುವಾಯ ಕೊಡಲ್ಪಡತಕ್ಕದ್ದು.

ಪೂ	ದರ ಮರ 1ಕ್ಕೆ	ರೂಪಾಯಿ	15	ಹೆಬನಿ	ದರ ಮರ 1ಕ್ಕೆ	ರೂಪಾಯಿ	6
ಹೆಸವ	ಡಿಟೋ	,,	10	ಯಬನಿ	ಡಿಟೋ	,,	10
ಕರೀಮರ	ಡಿಟೋ	,,	8	ಇತರ ತಮಾಂ ತರಹೆಯ ಮರ ಅಡಿ		,,	3½
ನಂದಿ	ಡಿಟೋ	,,	8	ಬೊಂಬುಗಳು 1,000ಕ್ಕೆ		,,	10

V. ಗೇಣೀದಾರನು ಇಲಾಚಿ ಮತ್ತು ಮೆಣಸು ವಿನಹ ಇತರ ಯಾವ ಫಾರೆಸ್ಟು ಪುಟ್ಟುವಳಿಗಾಗಲಿ ಹಕ್ಕುದಾರನಾಗಿರುವದಿಲ್ಲ. ಮತ್ತು ಫಾರಸ್ಟುಗಳಲ್ಲಿ ಯಿರತಕ್ಕ ರಸ್ತೆಗಳನ್ನು ಆವರಣಿಸುವದಕ್ಕಾಗಲಿ ನಿರೋಧಪಡಿಸುವದಕ್ಕಾಗಲಿ ಯಾ ಮತ್ಯಾವ ವಿಧವಾಗಿಯಾದರೂ ಅತಂಕಪಡಿಸುವದಕ್ಕಾಗಲಿ ಗೇಣೀದಾರಗೆ ಸ್ವತಂತ್ರ ವಿರುವದಿಲ್ಲ ಮತ್ತು ಗವರ್ಮೆಂಟಿನವರು ಅಂಥಾ ತಮಾಂ ಫಾರೆಸ್ಟುಗಳಲ್ಲಿ ಯಾ ಯಲ್ಲ ತರಹೆಯ ಪೂರ್ತಿಯಾದ ಹಕ್ಕುದಾರಿಗಳನ್ನು ತಾವೇ ವುಳಿಸಿಕೊಂಡಿರುತ್ತಾರೆ.

VI. ಈ ರೂಲ್ಸ ಅನುಸರಿಸಿ ಪಡದ ಇಲಾಚಿ ವ ಮೆಣಸಿನ ಗೇಣಿಯು ಗೇಣೀದಾರನ ಇಷ್ಟಾನುಸಾರ ವಿಕ್ರಯಿಸಲ್ಪಡಬಹುದು, ಯಾ ಅನ್ಯಥಾ ಪರಭಾರೆ ಮಾಡಲ್ಪಡಬಹುದು, ಪರಂತು, ಅಂಥಾ ಪರಭಾರೆಯ ವರ್ತಮಾನವು ಡೆಪ್ಯುಟಿ ಕಮ್ಮಿಷನರವರಿಗೆ ಅವರ ಆಫಿಸಿನಲ್ಲಿ ದಾಖಲೆ ಬಗ್ಯಾಗಿ ಕೊಡಲ್ಪಡತಕ್ಕದ್ದು. ಮತ್ತು ಗೇಣಿ ಪರಭಾರೆಯು ರೆಜಿಸ್ಟ್ರೇಷನ್ ಆಕ್ಟಿನ ನಿಯಾಮಗಳನ್ನನುಸರಿಸಿ ಕ್ರಮವಾಗಿ ರೆಜಿಸ್ಟರ ಮಾಡತಕ್ಕದ್ದು

ಪಿ. ಎನ್. ಪೂರ್ಣಯ್ಯ, ಡೆಪ್ಯುಟಿ ಕಮ್ಮಿಷನರ.

ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 15ನೇ ಏಪ್ರೆಲ್ 1889.

ಚನ್ನಗಿರೀ ತಾಲ್ಲೂಕು ಕುಕ್ಕುವಾಡ ವುಬ್ರಾಣೀ ಸ್ಟೇಟಫಾರೆಸ್ಟು ಡಿವಾರ್‌ಕೇಷನ್ ಲೈನ್‌ಮೇಲೆ ಕಡಿಸಿದ ಸಾಗವಾನಿ ಮತ್ತು ಕಾಡು ಜಾತೀ ಮರಗಳು ಈ ಕೆಳಗೆ ನಮೂದಿಸಿಯಿರುವ ಗ್ರಾಮಗಳಲ್ಲಿ ಅವುಗಳ ಬಾಜಾದಲ್ಲಿ ಕಂಡ ತಾರೀಖುಗಳಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬರ್.	ಗ್ರಾಮದ ಹೆಸರು.	ತಾಲ್ಲೂಕು.	ಹರಾಜ್ ತಾರೀಖು.	ಷರಾ.
1	ಮಾವಿನಹೊಳೆ ..	ಚನ್ನಗಿರಿ	15ನೇ ಮೇ 1889	ಹೊಳಲ್‌ಕೆರೆ ರೈಲ್ವೆಸ್ಟೇಷನಿನಿಂದ ಸುಮಾರು 20 ಮೈಲ್ ಆಗುತ್ತದೆ ಭಂಡಿದಾರಿ ಇರುತ್ತದೆ.
2	ಜೋಳದಹಾಳು ..	ಡಿಟೋ	17ನೇ ಡಿಟೋ	
3	ದಾನವಾಡಿ ..	ಶಿವಮೊಗ್ಗಾ	19ನೇ ಡಿಟೋ	
4	ಗಂಗೂರು ..	ಡಿಟೋ	21ನೇ ಡಿಟೋ	
5	ಹಾದೀಕೆರೆ ..	ತರೀಕೆರೆ	23ನೇ ಡಿಟೋ	ಅಜ್ಜಂಪುರದ ರೈಲ್ವೆಸ್ಟೇಷನಿನಿಂದ ಸುಮಾರು 10 ಮೈಲ್ ಆಗುತ್ತದೆ ಭಂಡಿದಾರಿ ಇರುತ್ತದೆ.
6	ವಿಟ್ಲಾಪುರ ..	ಡಿಟೋ	25ನೇ ಡಿಟೋ	
7	ವುಬ್ರಾಣಿ ..	ಚನ್ನಗಿರಿ	27ನೇ ಡಿಟೋ	ಶಿವನೇ ಸ್ಟೇಷನಿನಿಂದ 12 ಮೈಲ್ ಇರುತ್ತದೆ.
8	ಮಳಲ್‌ಭಾವಿ ...	ಡಿಟೋ	29ನೇ ಡಿಟೋ	

ಹರಾಜು ಷರತ್ತುಗಳು—ಸ್ಯ 1887ನೇ ಇಸವಿ ಸೆಪ್ಟಂಬರ್ 3ನೇ ತಾರೀಖು ನಂಬರ್ 35ನೇ ಮೈಸೂರು ಗೆಜೆಟ್‌ನಲ್ಲಿ ಪ್ರಾಯಿಷ್ ಆದ ಮೇರೆಗೆ ಮತ್ತು ನದರೀ ನೋಟಿಫಿಕೇಷನ್ ಹರಾಜ್ ಕಾಲದಲ್ಲಿ ವೋದಲ್ಪಡುತ್ತೆ.

ಇ. ಪಿ. ಲೀರಿ, ಅಸಿಸ್ಟೆಂಟ್ ಕನ್‌ಸರ್‌ವೇಟರ್

ಕೊಡಗು ಫಾರೆಸ್ಟ್ ಡಿಪಾರ್ಟ್‌ಮೆಂಟ್.

ನೋಟಿಸ್.

ಸ್ಯ 1889ನೇ ಇಸವಿ ಮೇ ತಾರೀಖು 4ರಲ್ಲು ಹುಣಸೂರು ಡಿಪೋ ಬಾಬತು ಈ ಕೆಳಗೆ ನಮೂದುಮಾಡಿದ ತೊಲೆ ಮಗ್ಗೈರು ಸಾಮಾನುಗಳು ಸ್ಯ 1889ನೇ ಜೂ ತಾರೀಖು 10ರಲ್ಲು ಹರಾಜ್ ಹಾಕಲ್ಪಡುವವು.

ತ್ಯಾಗು	770 ತೊಲೆ	22000 ಅಡಿ
ಹೊನ್ನೆ ಮತ್ತು ಇತರ	750 ,,	18000 ,,
ತ್ಯಾಗದ ಮರದ ಬಾಬತು ಉಯಿದ ಸಾಮಾನುಗಳು		9000 ,,
ಗಾಡೀಚಕ್ಕದ ಆರೇಕಾಲುಗಳು ಪಟ್ಟೀಮರಗಳು		2500 ಸಂಖ್ಯೆ

ಷರತ್ತು:—ಸ್ಯ 1885ನೇ ಇಸವಿ ಮೇ ತಾರೀಖು 16 ನಂಬರು 9ರ ಚೀಫ್ ಕಮ್ಮಿಷನರ ಸಾಹೆಬರವರ ನೋಟಿಫಿಕೇಷನ್ ಮೇರೆ.

ಎಫ್. ಬಿ. ಡಿಕಿರ್ಸನ್,
ಡೆಪ್ಯುಟಿ ಕನ್‌ಸರ್‌ವೇಟರ್, ಆಫ್ ಫಾರೆಸ್ಟ್ಸ್.

Mysore Govt. Central Press, Bangalore—1889.